
ಹೋರಾಟಕ್ಕಿಳಿದಿದ್ದ ಶಾಂತರಸರು, ಕಾಲೇಜಿನಿಂದ 2 ವರ್ಷಗಳ ಕಾಲ ಬಹಿಷ್ಕೃತಗೊಂಡಿದ್ದರು. ಅನೇಕ ಸಲ ಹೆಂಬೇರಾಳಿನಲ್ಲಿ, ರಾಯಚೂರಿನಲ್ಲಿ, ತ್ರಿವರ್ಣಧ್ವಜ ಹಾರಿಸಿ ರಜಾಕಾರರ ಸೈನಿಕರಿಂದ ವಾರಂಟಿಗೂ ಒಳಪಟ್ಟಿದ್ದರು. ಆಗಿನ ಬಿಕ್ಕಟ್ಟಿನ ಸಂದರ್ಭದಲ್ಲಿ ತಮ್ಮ ಸುತ್ತಮುತ್ತಲಿದ್ದ ಮುಸ್ಲಿಂ ಬಂಧುಗಳು ಹಿಂದೂಗಳನ್ನು ಹೇಗೆ ರಕ್ಷಿಸಿದರು ಎನ್ನುವ ಸಂಗತಿಯನ್ನು ಅವರು ಭಾವುಕತೆಯಿಂದ ವಿವರಿಸುತ್ತಿದ್ದರು. ರಜಾಕಾರರ ವಿರುದ್ಧ ಸಶಸ್ತ್ರ ಹೋರಾಟ ಮಾಡಿದ ಮೊದಲಿಗ ಶೋಯೋಬುಲ್ಲಾಖಾನ್ ಎಂಬ ಮುಸಲ್ಮಾನ ಎಂದು ಹೇಳುತ್ತಿದ್ದರು. ರಜಾಕಾರರ ದೌರ್ಜನ್ಯ ಖಾಸೀಂ ರಜ್ವಿಯ ಪಡೆಯ ದೌರ್ಜನ್ಯ ಆಗಿತ್ತೇ ಹೊರತು, ಇಲ್ಲಿಯ ಸ್ಥಳೀಯ ಮುಸಲ್ಮಾನರ ದೌರ್ಜನ್ಯವಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿದ್ದರು. ಅವರಿಗೆ ಅನೇಕ ಉರ್ದು ಪಂಡಿತರ ಸಾಂಗತ್ಯವೂ ಇತ್ತು.

ಶಾಂತರಸರ ಅನುವಾದಗಳಲ್ಲಿ ನನಗೆ ಬಹು ಇಷ್ಟವಾದದ್ದು ‘ರಸೀದಿ ಟಿಕೆಟ್’ ಹಾಗೂ ‘ಕಾಡಿನ ಬೇರು’. ಇವೆರಡರ ಮೂಲ ಕರ್ತೃ ಅಮೃತಾ ಪ್ರೀತಮ್. ಭಾರತದ ವಿಭಜನೆಯ ವೈಪರೀತ್ಯಗಳನ್ನು ಕಣ್ಣಾರೆ ಕಂಡಿದ್ದ ಅಮೃತಾ ಪ್ರೀತಮ್, ಆ ಅನುಭವಗಳನ್ನು ತಮ್ಮ ‘ರಸೀದಿ ಟಿಕೆಟ್’ನಲ್ಲಿ ದಾಖಲಿಸಿದ್ದಾರೆ. ಹೈದ್ರಾಬಾದ್ ಕರ್ನಾಟಕದಲ್ಲಿ ನಡೆದ ನಿಜಾಂ ಸರ್ಕಾರದ ಕ್ರೌರ್ಯಗಳನ್ನು ತಮ್ಮ ‘ಬಡೇಸಾಬ್ ಪುರಾಣ’ದಲ್ಲಿ ಶಾಂತರಸರು ದಾಖಲಿಸಿದ್ದಾರೆ. ಅಮೃತಾ ಪ್ರೀತಮ್ ನೋಡಲು ಭೌತಿಕ ಚಹರೆಯಲ್ಲಿ ಶಾಂತರಸರ ಹೋಲಿಕೆಯಂತೆ ಇದ್ದರು. ಅವರಿಬ್ಬರೂ ನೋಡಲು ಅವಳಿಜವಳಿಯಂತೆ ಇದ್ದರು. ಇದೊಂದು ಅಪರೂಪದ ಸಂಗತಿ. ಅಮೃತಾ ಪ್ರೀತಮ್ ಬರೆದ ‘ಕಾಡಿನ ಬೇರು’ ಹಾಗು ಶಾಂತರಸರು ಬರೆದ ‘ಮಲ್ಕಮ್ಮ ಕತೆಗಳು’ ಸಮಾಜದ ಸಿದ್ಧ ಪರಂಪರೆಯನ್ನು ಒಡೆದುಹಾಕುವಂತಿವೆ. ಅಂಗೂರಿ ಮತ್ತು ಮಲ್ಕಮ್ಮಳ ಪಾತ್ರಗಳು ಬೇರ ಬೇರೆ ಉಪಕ್ರಮಗಳಲ್ಲಿ ಅರಳಿದರೂ ಅವು ಅನುಭವಿಸಿದ ಮನೋಕ್ಷೋಭೆಗಳು ಒಂದೇ ಆಗಿವೆ.



ತಾರುಣ್ಯದಲ್ಲಿ ಶಾಂತರಸ

ಶಾಂತರಸರು ಹೈದ್ರಾಬಾದ್ ಕರ್ನಾಟಕದ ಸಮಷ್ಟಿಗಾಗಿ ಹೋರಾಡಿದರು. ಆತ್ಮಾಭಿಮಾನಕ್ಕಾಗಿ ದುಡಿದರು. ದಕ್ಷಿಣದವರ ದಾಕ್ಷಿಣ್ಯಕ್ಕೆ ಬೀಳದೆ ನಿಷ್ಠುರವಾಗಿ ವರ್ತಿಸಿದರು. ಅವರ ಕೊನೆಯ ದಿನಗಳಲ್ಲಿ ಅವರ ಜೊತೆ ನಾನೂ ಒಬ್ಬನಿದ್ದೆ ಎಂಬ ಸಮಾಧಾನ ನನ್ನದು.

ಬಯಲಾಟದ ಮಾಸ್ತರ್ ಜಂಬಲದಿನ್ನಿಯ ಸಿದ್ದಣ್ಣನನ್ನು ವಚನ ಗಾಯನ ಪಿತಾಮಹ ಮಾಡಿ ‘ಸಿದ್ದರಾಮ ಜಂಬಲದಿನ್ನಿ’ ಎಂಬ ಹೆಸರಿನಿಂದ ಖ್ಯಾತಿಹೊಂದಲು ಕಾರಣರು ಶಾಂತರಸರು. ಇಂದಿನ ಅನೇಕ ಪ್ರಸಿದ್ಧ ಕಥೆಗಾರರನ್ನು ರೂಪಿಸಿದ ಶ್ರೇಯಸ್ಸು ಅವರಿಗೆ ಸಲ್ಲಬೇಕು. ನರಸಿಂಹಲು ವಡವಾಟಿಯಂತಹ ರಾಯಚೂರಿನ ಬ್ಯಾಂಡ್ ಮಾಸ್ಟರರನ್ನು ಪಂಡಿತ್ ಸಿದ್ಧರಾಮ ಜಂಬಲದಿನ್ನಿಯವರಲ್ಲಿ ಶಿಷ್ಯರನ್ನಾಗಿ ಕಳುಹಿಸಿ, ಅವರು ಅಂತರರಾಷ್ಟ್ರೀಯ ಮಟ್ಟದ ಸಂದರ್ಶಕ ಪ್ರಾಧ್ಯಾಪಕ ಆಗಿ ಬೆಳೆದುದರ ಹಿಂದೆ ಶಾಂತರಸರ ಪ್ರತ್ಯಕ್ಷ ಹಾಗೂ ಪರೋಕ್ಷ ಪಾತ್ರವಿದೆ. ಎಲ್ಲಿಯೋ ಬಿದ್ದಿದ್ದ ತಾಳೆ ಓಲೆಗಳನ್ನು ಸಂಗ್ರಹಿಸಿ ಸಂಶೋಧಕ ಪ್ರಾಜ್ಞರಿಗೆ ಒಪ್ಪಿಸಿ, ಇಲ್ಲಿಯ ಇತಿಹಾಸ ಸಂಶೋಧನೆಗೆ ಶಾಂತರಸರು